ಹಾವೊಂದು ಡೈನಿಂಗ್ ಟೇಬಲ್‌ನ ಕಂಬಕ್ಕೆ ಸುತ್ತಿಕೊಂಡಿತ್ತು.

ಚಿಟಾರನೇ ಚೀರಿದಳು. ಚೀರುತ್ತಾ ಹೊರಗಡೆ ಓಡಿ ಬಂದಿದ್ದಳು. ಅಕ್ಕಪಕ್ಕದ ಮನೆಯವರೆಲ್ಲ ಬಂದರು, ಎಲ್ಲಿ ಎಲ್ಲಿ ಎಂದು ಹುಡುಕ ಹತ್ತಿದರು. ಅದೇ ಡೈನಿಂಗ್ ಟೇಬಲಿನ ಕಾಲಿಗೆ, ಡೈನಿಂಗ್ ಟೇಬಲಿನ ಕಾಲಿಗೆ... ಎಂದಳು. ಹತ್ತಿರ ಬಂದು ನೋಡಿದರೆ, ನಿನ್ನೆ ತಂದ ಕರ್ಟನ್ ಮೇಲೆ ಬಿದ್ದಿದ್ದ ಸೂರ್ಯನ ಕಿರಣ ಈ ಚಿತ್ರವನ್ನು ಸೃಷ್ಟಿಸಿತ್ತು. ಎಲ್ಲರೂ ಹೋದ ಮೇಲೆ ಮತ್ತೆ ಮನದಲ್ಲಿ ಹಾವಿನ ಭಯವಿತ್ತು. ನಿನ್ನೆ ರಾತ್ರಿಯ ಶಬ್ದಗಳು, ಗಾಳಿಗಳು, ಬೆಕ್ಕು ಕಿರುಚಾಟವು ಹೀಗೆ ಇರಬಹುದಲ್ಲವೆ? ಎಂಥಹ ಭ್ರಮಾ ಜಗತ್ತು ನನ್ನನ್ನು ಆಳುತ್ತದೆ. ನಿನ್ನೆ ರೆಕಾರ್ಡ ಮಾಡಿದ ಅವುಗಳನ್ನು ಕೇಳೋಣವೆಂದು ತನ್ನ ಮೊಬೈಲನಲ್ಲಿದ್ದ ರೆಕಾರ್ಡರ್ ತೆಗೆದು ನಿನ್ನ ರಾತ್ರಿಯ ರೆಕಾರ್ಡ ಆಪ್ಷನ್‌ಗೆ ಹೋಗಿ ಆನ್ ಮಾಡಿದಳು.



ಹಾಂ... ಇಲ್ಲ.

ಹುಂ... ಇಲ್ಲ.

ಎಲ್ಲವೂ ನಿಶ್ಯಬ್ದ, ತಾನು ಕೇಳಿದ ಆ ಶಬ್ದಗಳೆಲ್ಲವೂ, ಹೀಗೆ ಹಾವಿನಂಥವೇ ಎಂದುಕೊಂಡು ಮತ್ತೆ ಹುಡುಗನ ಬಗ್ಗೆ ಯೋಚಿಸಹತ್ತಿದಳು.

ಆ ಹುಡುಗ ಅಂಥವನಿರಲಿಕ್ಕಿಲ್ಲ, ಅಂಥವನಾಗಲು ಅನುವು ಮಾಡಿಕೊಟ್ಟವಳೇ ತಾನು. ಈ ಹದಿನೇಳು ವರ್ಷಗಳಿಂದ ಕಠಿಣ ಸರಪಳಿಗಳಿಂದ ಬಂಧಿಸಿದ ತೋಳು ಒಮ್ಮೆಂದೊಮ್ಮೆಲೆ ಹರಿದು ಬಿದ್ದಿತಲ್ಲ. ಸ್ಖಲನಗಳು ಉದ್ವೇಗಗಳು ಬಾಯ್ದೆರೆದು ಹೇಳಿದರೂ, ಆ ತೋಳು ಬಿಚ್ಚಿದ್ದಿಲ್ಲ, ಆದರೆ ಮಹಾದೇವನೆಂಬ ಈ ಹಳ್ಳಿ ಹುಡುಗ? ಅದಕ್ಕಾಗಿ ಅವನದೇನು ತಪ್ಪಿಲ್ಲ. ತಪ್ಪಿರುವುದು ನನ್ನದೆ.

ಗುಳಿಗೆ ತೆಗೆದುಕೊಂಡು ಹಾಗೆ ಸುಮ್ಮನೆ ಕುಳಿತಳು.

ಸಂಜೆ ನಾಲ್ಕು ಗಂಟೆಯಾಗಿರಬಹುದು.

ಬಾಗಿಲು ಬಡಿದುಕೊಂಡಿತು. ಬಾಗಿಲು ತೆಗೆಯಲು ಹೋದಳು.

ಅರೇ... ಅದೇ ಮಹಾದೇವ ಬಂದಿದ್ದಾನೆ. ಗಾಜಿನ ಗ್ಲಾಸಿನ ಆಚೆ ಅವನು ಕಾಣುತ್ತಿದ್ದಾನೆ. ಅವನನ್ನು ಒಳಗೆ ಬಿಟ್ಟುಕೊಳ್ಳಬಾರದು. ನಾನ್‌ಸೆನ್ಸ್ ಎಂದು ಮರಳಿ ಸೋಫಾದಲ್ಲಿ ಬಂದು ಆನಿಸಿಕೊಂಡು ಕೂತಳು.

ಮತ್ತೆ ಟಣ್... ಟಣ್... ಟಣ್... ಅವನು ಬಿಡಲಾರ. ಆದರೆ ನಾನು ಅವನ ಮೇಲಧಿಕಾರಿಯಾಗಿ ವರ್ತಿಸಿ ಕಳಿಸಿದರಾಯಿತು ಎಂದು ಬಾಗಿಲು ತೆಗೆದಳು.

ಅವನು, 'ನಮಸ್ಕಾರ ಮೇಡಂ' ಎಂದು ಮುಗುಳ್ನಗುತ್ತಾನೆ. ಇವಳು ಸುಮ್ಮನೆ ಗಂಭೀರ ನಗೆ ನಗುತ್ತಾಳೆ. ಎಲ್ಲರಂತೆ ಇವನೂ ಹಣ್ಣು, ಹಂಪಲು, ಒಂದು ಬೊಕ್ಕೆ ಹಿಡಿದು ಬಂದಿದ್ದಾನೆ. ಒಬ್ಬರಿಗೊಬ್ಬರು ವಿರುದ್ಧ ದಿಕ್ಕಿನಲ್ಲಿ ಕುಳಿತ್ತಿದ್ದಾರೆ.

'ಮೇಡಂ ನೀವು ನನ್ನ ಕ್ಷಮಿಸಬೇಕು' ಎನ್ನುತ್ತಾನೆ.

'ಯಾಕೆ' ಎನ್ನುವಂತೆ ಅವನತ್ತ ನೋಡುತ್ತಾಳೆ.

'ನನ್ನ ಅನಾಗರಿಕ ವರ್ತನೆಯಿಂದ, ನೀವು ಹೀಗೆ ಡಿಪ್ರೆಶನ್‌ಗೆ ಹೋಗಿದ್ದೀರಿ. ನನಗೆ ಗೊತ್ತು' ಎನ್ನುತ್ತಾನೆ.

'ಹೌದು. ಅದು ಸತ್ಯ. ನೀನು ಚೆನ್ನಾಗಿ ಕೆಲಸ ಮಾಡು. ನೀನು ನನ್ನ ಮಗನ ಸಮಾನ. ನನ್ನ ಅರ್ಧ ವಯಸ್ಸಿನವನು. ನನಗೆ ಹಾಗೆ ಮಾಡಬಹುದೇ?' ಎಂದಾಗ ಮಹಾದೇವ ಇವಳ ಕಾಲಿನ ಮೇಲೆ ಬಿದ್ದು ಬೋರಾಡಿ ಅಳಹತ್ತಿದ.

'ಹೌದು. ನೀವು ನನ್ನ ತಾಯಿಯಂಥವರು, ನಿಮಗೆ ಹಾಗೆ ವರ್ತಿಸಬಾರದಾಗಿತ್ತು. ಇಂದಿನಿಂದ ನಾನು ನಿಮ್ಮನ್ನು ಮೇಡಂ ಅನ್ನುವದಿಲ್ಲ. ಅಮ್ಮ ಎನ್ನುತ್ತೇನೆ' ಎನ್ನಹತ್ತಿದ. 'ನೀನು ಹೋಗು. ನಾನು ಡ್ರೌಜೀ ಮಾತ್ರೆಗಳ ತೆಗೆದುಕೊಂಡಿದ್ದೇನೆ. ಮತ್ತೆ ನಾಳೆ ಸಿಗೋಣ' ಎಂದಾಗ ತಾಯಿಯ ಆಜ್ಞೆ ಪಾಲಿಸುವ ಮಗನಂತೆ ಅವನು ಗೇಟು ದಾಟಿ ಹೋದ, ಅವನು ಮುಂದೆ ಉಸುರಿದ ನನ್ನ ವಾಕ್ಯಗಳೆಲ್ಲವೂ ಬಾಯಿಪಾಠದ ವಾಕ್ಯಗಳು ಎಂದುಕೊಂಡಳು. ಎಂಥಹ ಸಮಯಸಾಧಕತನ, ಅವನನ್ನು ಅಪರಾಧಿಯಾಗಿಸಿದ ಕ್ಷಣ, ಈ ಸಾಧಕತನದಲ್ಲಿ ನಿರಪರಾಧಿ ಅಪರಾಧಿ,